# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **692**

ಸದಸ್ಯರ ಹೆಸರು : ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸುವವರು : ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು

ಉತ್ತರಿಸಬೇಕಾದ ದಿನಾಂಕ : 17.09.2021

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರ್ಗಿ ಜಿಲ್ಲೆಯಲ್ಲಿ ಆರ್ಥಿಕ ಸಂಕಷ್ಟದಿಂದ ಮುಚ್ಚಿರುವ ದಾಲ್‌ಮಿಲ್‌ಗಳನ್ನು ಪುನಃಶ್ಚೇತನಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | ದಿನಾಂಕ: 29/11/2018 ರಂದು ಕಲಬುರುಗಿ ದಾಲ್‌ಮಿಲ್ ಅಸೋಷಿಯೇಶನ್ ಪದಾಧಿಕಾರಿಗಳೊಂದಿಗೆ ಮತ್ತು ಸಂಬಂಧಿಸಿದ ಇಲಾಖೆಗಳೊಂದಿಗೆ ಸರ್ಕಾರದ ಕಾರ್ಯದರ್ಶಿ (ಎಂ.ಎಸ್.ಎಂ.ಇ, ಗಣಿ & ಸಕ್ಕರೆ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಗಿದ್ದು, ಇದರಲ್ಲಿ ಸಂಘದವರು ಈ ಕೆಳಗಿನ 10 ರಿಯಾಯಿತಿಗಳನ್ನು ಕೋರಿರುತ್ತಾರೆ.<br><br>1. ಚೇತರಿಕೆ ರಜೆ (ರಿಕವರಿ ಹಾಲಿಡೆ)<br>2. ದಾಲ್‌ಮಿಲ್‌ಗಳನ್ನು ಆದ್ಯತಾ ವಲಯ ಎಂದು ಪರಿಗಣಿಸುವ ಬಗ್ಗೆ.<br>3. ಎನ್.ಪಿ.ಎ ಯನ್ನು ಮರು ವ್ಯಾಖ್ಯಾನಿಸುವುದು.<br>4. ಓ.ಟಿ.ಎಸ್ (ಒಂದು ಸಲ ಮರು ಪಾವತಿ).<br>5. ಪ್ರೋತ್ಸಾಹ ಧನ.<br>6. ಎ.ಪಿ.ಎಂ.ಸಿ ಸೆಸ್ ವಿನಾಯಿತಿ.<br>7. ವಿದ್ಯುತ್ ಬಿಲ್ ರಿಯಾಯಿತಿ.<br>8. ವಿದ್ಯುತ್ ಎಲ್.ಟಿ ಮಿತಿಯನ್ನು ಹೆಚ್ಚಿಸುವ ಬಗ್ಗೆ.<br>9. ಕನಿಷ್ಠ ಖರೀದಿ ಮಿತಿಯನ್ನು ಸಡಿಲಿಸುವುದು.<br>10. ಬೇಳೆ ಆಮದುಗೆ ನಿರ್ಬಂಧ ವಿಧಿಸುವುದು.<br><br>ಈ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸಂಬಂಧಿಸಿದ ಇಲಾಖೆಗಳಿಗೆ ಕೋರಲಾಗಿದೆ.<br><br>1. ಬ್ಯಾಂಕ್‌ಗಳಿಗೆ ಸಂಬಂಧಿಸಿದ್ದು –4 ವಿಷಯಗಳು<br>2. ಕೃಷಿ ಮಾರಾಟ ಇಲಾಖೆ –1 ವಿಷಯ<br>3. ಜೆಸ್ಕಾಂ/ ಕೆ.ಆರ್.ಇ.ಸಿ –1 ವಿಷಯ<br>4. ನಫೆಡ್ –1 ವಿಷಯ<br>5. ಸರ್ಕಾರದ ಮಟ್ಟದಲ್ಲಿ –3 ವಿಷಯಗಳು<br><br>ರಾಜ್ಯ ಮಟ್ಟದ ಬ್ಯಾಂಕರುಗಳ ಸಮಿತಿ ಸಭೆಯಲ್ಲಿ 4 ವಿಷಯಗಳ / ರಿಯಾಯಿತಿಗಳ ಬಗ್ಗೆ ದಿನಾಂಕ:07-12-2018 ರಂದು ನಡೆದ 143 ನೇ ರಾಜ್ಯ ಮಟ್ಟದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು. ದಾಲ್‌ಮಿಲ್‌ಗಳ ಮಾಲೀಕರ ಕೋರಿಕೆಯಂತೆ ಭಾರತೀಯ ರಿಸರ್ವ್ ಬ್ಯಾಂಕ್ |

| | | |
|---|---|---|
| | | ಮಾರ್ಗಸೂಚಿಯ ವ್ಯಾಪ್ತಿಯಲ್ಲಿ ಚೇತರಿಕೆ ರಜೆಗೆ ಸಂಬಂಧಿಸಿದಂತೆ ದಾಲ್‌ಮಿಲ್‌ಗಳ ಖಾತೆಗಳ ವಿವರಗಳನ್ನು ಸಮಿತಿಗೆ ಬ್ಯಾಂಕ್‌ವಾರು ಸಲ್ಲಿಸಲು ತೀರ್ಮಾನಿಸಲಾಗಿದೆ.<br><br>ಅದರನ್ವಯ, ಇಲಾಖೆಯು ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಕಲಬುರ್ಗಿ ರವರ ಮುಖಾಂತರ ದಿನಾಂಕ:13-3-2019 ರಂದು ದಾಲ್‌ಮಿಲ್‌ಗಳ ಘಟಕಗಳ ಮಾಹಿತಿಯನ್ನು ಪಡೆಯಲಾಗಿದೆ ಮತ್ತು ಈ ಮಾಹಿತಿಯನ್ನು ಸಂಚಾಲಕರು, ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿ ರವರಿಗೆ ದಿನಾಂಕ:26-04-2019 ರಂದು ಸಲ್ಲಿಸಲಾಗಿದೆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಈಗಾಗಲೇ ತಾವು ಸಾಲ ನೀಡಿರುವ ದಾಲ್ ಮಿಲ್‌ಗಳ ಸಾಲದ ಕಂತುಗಳನ್ನು ಓ.ಟಿ.ಎಸ್ ಇತ್ಯಾದಿಗಳ ಮೂಲಕ ಪುನಶ್ಚೇತನಗೊಳಿಸಿದೆ. |
| ಆ) | ಕೇಂದ್ರ ಸರ್ಕಾರದ ಆತ್ಮ ನಿರ್ಭರ ಯೋಜನೆಯಡಿ ರೂಪಿಸಿರುವ ಕಿರು ಆಹಾರ ಸಂಸ್ಕರಣಾ ಉದ್ಯಮಗಳ ಸಂಘಟನಾ ಯೋಜನೆ (ಪಿ.ಎಂ.ಎಫ್.ಎಂ.ಇ)ಯಲ್ಲಿ ಕಲಬುರ್ಗಿ ಜಿಲ್ಲೆಯನ್ನು ಆಯ್ಕೆ ಮಾಡಿಕೊಂಡಿದ್ದು, ಈ ಯೋಜನೆ ಯಾವ ಹಂತದಲ್ಲಿದೆ. ಈ ಯೋಜನೆಗೆ ಬಿಡುಗಡೆಯಾದ ಹಣ ಎಷ್ಟು; | ಕೇಂದ್ರ ಸರ್ಕಾರದ ಆತ್ಮ ನಿರ್ಭರ ಭಾರತ ಅಭಿಯಾನದಡಿಯಲ್ಲಿ ಬರುವ ಪ್ರಧಾನಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ ಯೋಜನೆ (PMFME)ಯಡಿಯಲ್ಲಿ ಕಲ್ಬುರ್ಗಿ ಜಿಲ್ಲೆಯಲ್ಲಿ ಒಂದು ಜಿಲ್ಲೆಗೆ ಒಂದು ಉತ್ಪನ್ನ (One District One Product) ಕಾರ್ಯವಿಧಾನದಡಿಯಲ್ಲಿ ತೊಗರಿಯನ್ನು ಆಯ್ಕೆ ಮಾಡಲಾಗಿದೆ. ಯೋಜನೆಯ ಅನುಷ್ಠಾನವನ್ನು ಪ್ರಾರಂಭಿಸಲಾಗಿದ್ದು, ಕೇಂದ್ರ ಸರ್ಕಾರದ ಆಹಾರ ಸಂಸ್ಕರಣ ಉದ್ದಿಮೆಗಳ ಮಂತ್ರಾಲಯದ ಆನ್‌ಲೈನ್ ಪೋರ್ಟಲ್‌ನಲ್ಲಿ ಆಸಕ್ತ ಉದ್ದಿಮೆದಾರರು ಅಥವಾ ರೈತರ ಗುಂಪುಗಳು ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.<br><br>ಕಲ್ಬುರ್ಗಿ ಜಿಲ್ಲೆಯಲ್ಲಿ ಈವರೆವಿಗೂ 21 ಅರ್ಜಿಗಳು ಸಲ್ಲಿಕೆಯಾಗಿದ್ದು, 24 ಅರ್ಜಿಗಳು ಕರಡು ಹಂತದಲ್ಲಿರುತ್ತದೆ. ಸಲ್ಲಿಕೆಯಾದ ಅರ್ಜಿಗಳ ಪೈಕಿ 15 ಅರ್ಜಿಗಳನ್ನು ಜಿಲ್ಲಾ ಮಟ್ಟದ ಸಮಿತಿ / ಜಿಲ್ಲಾ ನೋಡಲ್ ಅಧಿಕಾರಿ ತಮ್ಮ ಶಿಫಾರಸ್ಸಿನೊಂದಿಗೆ ಬ್ಯಾಂಕ್ ಸಾಲ ಮಂಜೂರಾತಿಗಾಗಿ ಬ್ಯಾಂಕುಗಳಿಗೆ ಆನ್‌ಲೈನ್‌ನಲ್ಲಿ ರವಾನಿಸಿರುತ್ತಾರೆ. ಈ ಅರ್ಜಿಗಳು ಬ್ಯಾಂಕ್‌ಗಳಲ್ಲಿ ಪರಿಶೀಲನೆಯ ಹಂತದಲ್ಲಿದೆ.<br><br>ಈ ಯೋಜನೆಯ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರವು ರಾಜ್ಯಕ್ಕೆ 2020-21ನೇ ಸಾಲಿನಲ್ಲಿ ವಿವಿಧ ಕಾರ್ಯಕ್ರಮ / ಘಟಕಗಳ ಅನುಷ್ಠಾನಕ್ಕಾಗಿ ರೂ.32.46 ಕೋಟಿ ಅನುದಾನವನ್ನು ನೀಡಿರುತ್ತದೆ. |
| ಇ) | ಈ ಯೋಜನೆಯಿಂದ ಈ ವಿಭಾಗದ ಕಾರ್ಮಿಕರಿಗೆ ಉದ್ಯೋಗ ಸಿಗುವ ಅವಕಾಶವಿದೆಯೇ? | ಹೌದು, ಯೋಜನೆಯ ಅನುಷ್ಠಾನದಿಂದ ಕಲ್ಬುರ್ಗಿ ಜಿಲ್ಲೆಯ ಕಾರ್ಮಿಕರಿಗೆ ಉದ್ಯೋಗ ಸಿಗುವ ಅವಕಾಶವಿರುತ್ತದೆ. |

**ಸಿಐ 163 ಎಸ್‌ಎಸ್‌ಐ 2021**

ಎನ್. ನಾಗರಾಜ್

*(ಎನ್ ನಾಗರಾಜ್ (ಎಂ.ಟಿ.ಬಿ))*

**ಪೌರಾಡಳಿತ, ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು.**